ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹಾಗೂ ಮಾನ್ಯ ಸರಿಕಾರ್ ಭೀಮಪ್ಪ ಚೆನ್ನಪ್ಪನವರು ಹಾಗೂ ಇತರೇ ಮಾನ್ಯ ಸದಸ್ಯರು ಗಂಭೀರವಾದಂತ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಯಾವ ತಹಶೀಲ್ದಾರರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ವಿಫಲರಾಗಿ ಈ ರೀತಿಯ ಪತ್ರವನ್ನು ಬರೆಯುತ್ತಾರೆಯೋ ಇಂಥ ಸ್ವಭಾವದ ಬಗ್ಗೆಯೇ ನಾವೊಂದು ಕಡಿವಾಣವನ್ನು ಹಾಕಬೇಕಾಗುತ್ತದೆ. ಯಾವುದಾದರೂ ಡೆಪ್ಯೂಟಿ ಕಮಿಶನರ್ ಆಗಲೀ, ತಹಶೀಲ್ದಾರರಾಗಲೀ, ಯಾವುದೇ ಉನ್ನತ ಅಧಿಕಾರಿಗಳಾಗಲೀ ಸಮಾಜದ ಜನರ ಕಸ್ಟೋಡಿಯನ್ ಆಗಿ ಸರ್ಕಾರದಲ್ಲಿ ಕುಳಿತಾಗ ಅವರು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಆದಕಾರಣ ಈ ಹಿನ್ನಲೆಯಲ್ಲಿ ನಾನು ಮುಖ್ಯ ಕಾರ್ಯದರ್ಶಿಗಳ ಜೊತೆ ಮಾತನಾಡುತ್ತೇನೆ. ನೀವು ತೋರಿಸಿದ ಪತ್ರವನ್ನು ನಾನು ತರಿಸಿಕೊಳ್ಳುತ್ತೇನೆ. ತಾವೂ ಕೂಡ ಕಳುಹಿಸಿಕೊಡಿ. ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ನಾನು ಕೊಡುತ್ತೇನೆ.

4. Announcement

Mr. Deputy Speaker : One small information. Delegates from Chechenya. Five parliament Members from Chechnia. Republic of Russia, and Education Minister from south Africa and Princess of oman are witnessing our House proceedings in Speaker's gallery. In this connection. I welcome the delegates on behalf of the members of this August House.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು (ಮುಂದುವರಿದುದು)

(ಖಖ) ವಿಷಯ : ಬೆಂಗಳೂರು ಮೆಟ್ರೋ ರೈಲು ಯೋಜನೆ ಶಿಲಾನ್ಯಾಸ ಸಮಾರಂಭದಲ್ಲಿ ಬೆಂಗಳೂರು ಮಹಾನಗರಪಾಲಿಕೆಯ ಮೇಯರ್‌ರವರಿಗೆ ಅಗೌರವ ತೋರಿಸಿದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಮೆಟ್ರೋ ರೈಲು ಯೋಜನೆ ಬಗ್ಗೆ ಬೆಂಗಳೂರು ನಗರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಿಂದ ಶಿಲಾನ್ಯಾಸ ನಡೆಯಿತು. ಮೊದಲನೆಯದಾಗಿ "ನಮ್ಮ ಮೆಟ್ರೋ" ಎನ್ನುವುದು ಕನ್ನಡದಲ್ಲಿ ಇರಲಿಲ್ಲ. ಇದರಿಂದ ರಾಜ್ಯಕ್ಕೆ ಎಷ್ಟು ಅಗೌರವ ಎಂದರೆ ಅದು ಕನ್ನಡದಲ್ಲಿ ಇರಬೇಕಾಗಿತ್ತು, ಎಲ್ಲಾ ಸರ್ಕಾರಿ ಕೆಲಸಗಳ ಆಮ್ಹಾನ ಪತ್ರಿಕೆಗಳು ಕನ್ನಡದಲ್ಲಿ ಇರಬೇಕು. ಇದಲ್ಲದೇ ಯಾವುದೇ ಸರ್ಕಾರಿ

ಸಮಾರಂಭಗಳು, ಸಭೆಗಳು. ನಾವು ನಡೆಸತಕ್ಕಂಥ ಸರ್ಕಾರಿ ಸಮಾರಂಭಗಳು. ಬರೇ ಘೋಷಣೆ ಬಂದಿದ್ದರೆ ಸಾಧ್ಯವಿಲ್ಲ.

4.30 P.M.

ರಾಷ್ಟ್ರೀಯ ಸಮಾರಂಭಗಳು ಇರಬಹುದು, ಸರ್ಕಾರಿ ಸಮಾರಂಭಗಳು ಇರಬಹುದು ಅಥವಾ ರಾಜ್ಯ ಸಮಾರಂಭಗಳು ಇರಬಹುದು, ರಾಜ್ಯದಲ್ಲಿ ನಡೆಯುವಂತಹ ಸಮಾರಂಭಗಳು ಸಂಪೂರ್ಣವಾಗಿ ಕನ್ನಡದಲ್ಲೇ ನಡೆಯಬೇಕು ಹಾಗೂ ಹೊರಗಡೆಯಿಂದ ಬಂದಿರುವವರು ಯಾವ ಭಾಷೆಯಲ್ಲಿ ಮಾತನಾಡುತ್ತಾರೆ ಅದು ಅವರಿಗೆ ಸೇರಿದ್ದು. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾಗಲಿ, ಉಪಮುಖ್ಯಮಂತ್ರಿಗಳಾಗಲಿ, ಮಂತ್ರಿಗಳಾಗಲಿ ಅವರು ಭಾಷಣ ಮಾಡುವಾಗ ಕನ್ನಡದಲ್ಲೇ ಮಾತನಾಡಬೇಕು. ಮತ್ತು " ನಮ್ಮ ಮೆಟ್ರೋ " ಎಂದು ಇಂಗ್ಲೀಷ್‌ನಲ್ಲಿ ಬಂದಿದೆ. ನನಗೆ ಅನ್ನಿಸುತ್ತದೆ ಅದನ್ನು ಕನ್ನಡದಲ್ಲೇ ಹಾಕಿದ್ದರೆ ಎಷ್ಟು ಶೋಭೆ ಬರುತ್ತಿತ್ತು. ನಮ್ಮ ರಾಜ್ಯದ ಭಾಷೆ ಕನ್ನಡ ಭಾಷೆ ಎಂದು ಬಹಳ ಹೇಳುತ್ತೇವೆ. ಕನ್ನಡ ಭಾಷೆಯ ಬಗ್ಗೆ ಬಹಳ ವಿಚಾರಪೂರ್ಣ ವಾದಂತಹ ಮಾತುಗಳನ್ನು ಹೇಳುತ್ತಿದ್ದೇವೆ. ಅದರಲ್ಲೂ 50 ನೇ ವರ್ಷದಲ್ಲಿ ಸುವರ್ಣ ಕರ್ನಾಟಕ ಬರುತ್ತಿದೆ. ಇಲ್ಲಿ ಕನ್ನಡ ಆಡಳಿತ ಭಾಷೆ ಎಂದು ಪ್ರಾಮಾಣಿಕವಾಗಿ ಆಗಿಲ್ಲ. ಕನ್ನಡದಲ್ಲಿ ಸುತ್ತೋಲೆಗಳು ನೂರಕ್ಕೆ ನೂರು ಬರುತ್ತಿಲ್ಲ. ಎಲ್ಲಾ ಸಂಪೂರ್ಣವಾಗಿ ನೂರಕ್ಕೆ 90 ರಷ್ಟು ಇಂಗ್ಲೀಷ್‌ನಲ್ಲೇ ಬರುತ್ತಿದೆ. ಕನ್ನಡ ಆಡಳಿತ ಭಾಷೆ ಎನ್ನುವುದಕ್ಕೆ ಸ್ವಲ್ಪವೂ ಗೌರವ ಇಲ್ಲ: ಒಂದು ಚಿಂತನೆ ಇಲ್ಲ, ಆ ದೃಷ್ಟಿಯಿಂದ ಈ ಮೆಟ್ರೋ ರೈಲು ಯೋಜನೆ ರಾಜ್ಯಕ್ಕೆ ಪ್ರಮುಖವಾದಂತಹ ಯೋಜನೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆಯುವಂತಹ ಯೋಜನೆ ಕನ್ನಡದಲ್ಲಿ ಉದ್ಘಾಟನೆಯಾಗಲಿಲ್ಲ. ಅಕ್ಷರ ಬರದೇ ಇರತಕ್ಕಂಥಾದ್ದು ಅಕ್ಷಮ್ಯ ಅಪರಾಧ. ಕನ್ನಡಿಗರ ಭಾಷೆಗೆ ಮಾಡಿರುವಂತಹ ಮಹಾ ದ್ರೋಹ. ಇದರ ಜೊತೆಗೆ ಬಹಳ ಪ್ರಾಮುಖ್ಯವಾಗಿ ಸಿಟಿ ಮೇಯರ್ ರವರು, ಎಲ್ಲರಿಗಿಂತ ಹೆಚ್ಚಾಗಿ ಸಮಾರಂಭಕ್ಕೆ ಪ್ರಧಾನಮಂತ್ರಿಗಳು ಬರಬಹುದು, ಬೇರೆ ದೇಶದ ಪ್ರಧಾನ ಮಂತ್ರಿಗಳು ಬರಬಹುದು, ಅಧ್ಯಕ್ಷರು ಬರಬಹುದು, ಯಾರೇ ಬಂದರೂ ಕೂಡ ಮೊದಲನೆಯ ಸ್ಥಾನವನ್ನು ಮೇಯರ್‌ರವರಿಗೆ ಕೊಡಬೇಕು. ಬೆಂಗಳೂರು ನಗರದಲ್ಲಿ ಸಮಾರಂಭ ನಡೆದಾಗ ಮೊದಲು ಮೇಯರ್ ರವರಿಗೆ ಮೊದಲನೆ ಸ್ಥಾನವನ್ನು ಕೊಡಬೇಕು. ಮೇಯರ್‌ನವರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿ ಅವರನ್ನು ಎಲ್ಲೋ ಕೆಳಗಡೆ ಕೂರಿಸಿದ್ದರು. ಸಮಾರಂಭ ನಡೆಯುವ ವೇದಿಕೆ ಮೇಲೆ ಮೇಯರ್ ಅವರು ಇಲ್ಲ. ಇದು ಬಹಳ ಅತ್ಯಂತ ಅಗೌರವ. ಬೆಂಗಳೂರಿನ 80 ಲಕ್ಷ ಜನ ನಾಗರೀಕರಿಗೆ ಬೆಂಗಳೂರಿನ ಜನತೆಗೆ ಅಗೌರವ ಮಾಡಿರತಕ್ಕಂಥಾದ್ದು. ಮೇಯರ್‌ರವರನ್ನು ಏಕೆ ಕರೆಯಬೇಕು? ನನಗೆ ಅನ್ನಿಸುತ್ತದೆ ನಾವ್ಯಾರಾದರೂ ಮೇಯರ್ ಆಗಿದ್ದರೆ ಖಂಡಿತ ಆ ಸಮಾರಂಭದಲ್ಲಿ ಭಾಗವಹಿಸುತ್ತಿರಲಿಲ್ಲ. ಆದರೆ ಅವರು ಪಾಪ ಗೌರವಕ್ಕೋಸ್ಕರಕ್ಕಾಗಿ ಸಮಾರಂಭಕ್ಕೆ ಕರೆದಿದ್ದಾರಲ್ಲಾ ಎಂದು ಎಲ್ಲೋ ಕೆಳಗಡೆ ಕುಳಿತಿದ್ದರು. ಆದರೆ ಮೇಲುಗಡೆ ಮೆಟ್ರೋ ರೈಲು ಶಂಕುಸ್ಥಾಪನೆ ಆಗುವಾಗ

ಮೇಯರ್‌ರವರಿಗೆ ಕೂಡಬೇಕಾದಂತಹ ಸ್ಥಾನವನ್ನು ಸರ್ಕಾರ ಕೊಟ್ಟಿಲ್ಲ. ಮೇಯರ್‌ರವರಿಗೆ ಅಗೌರವ ಮಾಡಿದ್ದಾರೆ. ಮೇಯರ್‌ರವರಿಗೆ ಅಗೌರವ ಮಾಡುವುದರ ಮೂಲಕ ಈ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದ ನಾಗರೀಕರಿಗೆ ಅಪಮಾನ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಧಾನಿಗಳು ಬರುತ್ತಾರೆ ಎಂದು ಈ ಶಾಸನ ಸಭೆಯನ್ನು ಒಂದು ದಿವಸ ಮುಂದೂಡಿದಿರಿ. ಆದರೆ ಈ ಶಾಸನ ಸಭೆ ಸದಸ್ಯರಿಗೆ ಕನಿಷ್ಟ ಸೌಜನ್ಯಕ್ಕಾದರೂ ಒಂದು ಆಹ್ವಾನ ಪತ್ರಿಕೆಯನ್ನು ಕೊಡುವಂತಹ ರೀತಿಯಲ್ಲಿ ಸರ್ಕಾರ ಬರಲಿಲ್ಲವೆಂದರೆ ಏಕೆ ಶಾಸನ ಸಭೆ ನಡೆಸಬೇಕು ಎಂದು ಅರ್ಥವಾಗಲಿಲ್ಲ. ಮಂಗಳೂರು ಪ್ರಾಜೆಕ್ಟ್ ಆಗಲಿ. ಬೆಂಗಳೂರಿನ ಪ್ರಾಜೆಕ್ಟ್ ಆಗಲಿ ಒಂದು ಇನ್ವಿಟೇಷನ್ ಎಕ್ಸ್‌ಟೆಂಡ್ ಮಾಡದೆ ಇಡೀ ಶಾಸನ ಸಭೆಯನ್ನು ಒಂದು ದಿವಸ ಮುಂದಕ್ಕೆ ಹಾಕಿಸಿಬಿಡುವುದು ಯಾರದೋ ತೆವಲಿಗೆ ಏನು ನಡೆಯುತ್ತಿದೆ ಎಂಬುದು ನಮಗೆ ಅರ್ಥವಾಗಬೇಕಲ್ಲಾ ಹಾಗಾದರೆ ಬೆಂಗಳೂರು ಮೆಟ್ರೋ ರೈಲು ಶಂಕುಸ್ಥಾಪನೆ ಆಗುವುದರ ಬಗ್ಗೆ ಇಲ್ಲಿರುವಂತಹ ಶಾಸಕರಿಗೆ ಯಾರಿಗೂ ಸಂಬಂಧವಿಲ್ಲವೆ? ಓಎನ್‌ಜಿಸಿ ಕಾರ್ಯಕ್ರಮ, ನಿಜವಾಗಿ ನಿಮಗೆ ನಮ್ಮ ಶಾಸಕರ ಬಗ್ಗೆ ಅಭಿಮಾನ ಇದ್ದಿದ್ದರೆ, ಎಲ್ಲರೂ ಕೂಡ ಬೆಂಗಳೂರಿನಲ್ಲಿ ಇದ್ದೆವು. ಬಸ್ಸು ಅಥವಾ ಏನಾದರೂ ವ್ಯವಸ್ಥೆ ಮಾಡಿಕೊಂಡು ಬರುತ್ತಿದ್ದರು. ತಾವು ಆ ಕಾರ್ಯಕ್ರಮಕ್ಕೆ ಕರೆಯಬೇಕಾಗಿತ್ತು. ಮಹಾಮಸ್ತಕಾಭಿಷೇಕಕ್ಕೆ ಕರೆದುಕೊಂಡು ಹೋಗುವುದಕ್ಕಾಗುತ್ತದೆ. ಒಂದು ದೊಡ್ಡ ಪ್ರಾಜೆಕ್ಟ್‌ಗೆ ಎಂಎಲ್‌ಎಗಳಿಗೆ ಒಂದು ಇನ್ವಿಟೇಷನ್ ಕೊಡುವುದಕ್ಕಾಗದೆ ಇರುವಂತಹ ಸ್ಥಿತಿಗೆ ಈ ಸರ್ಕಾರ ಬಂದಿದೆ. ಇದು ನಿಜವಾಗಿ ಕರ್ತವ್ಯಲೋಪ. ನೀವು ಹಾಗೆಯೇ ಮಾಡಿದ್ದರೆ ನಾವು ಕೇಳುತ್ತಿರಲಿಲ್ಲ. ಆದರೆ ಇಡೀ ಸಭೆಯನ್ನು ಅವತ್ತು ಮುಂದಕ್ಕೆ ಹಾಕಿ ಒಬ್ಬ ಶಾಸಕರನ್ನೂ ಕೂಡ ತಾವು ಆ ಒಂದು ಕಾರ್ಯಕ್ರಮಕ್ಕೆ ಕರೆದಿಲ್ಲ. ಇಲ್ಲಿ ಅದರ ಜವಾಬ್ದಾರಿ ಯಾರು ಹೊರುತ್ತೀರಿ ಎಂಬುದನ್ನು ಹೇಳಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) : ಈಗಾಗಲೇ ಅನೇಕ ಬಾರಿ ಅನೇಕ ರೀತಿಯಲ್ಲಿ ಶಿಷ್ಟಾಚಾರವನ್ನು ಪರಿಪಾಲನೆ ಮಾಡಬೇಕೆಂದು ಹೇಳಿ ಸುತ್ತೋಲೆಯನ್ನು ಕಾಲಕಾಲಕ್ಕೆ ಕಳುಹಿಸುತ್ತಿದ್ದೇವೆ. ಅದು ಯಾವುದೇ ಎಷ್ಟೇ ದೊಡ್ಡ ಸಮಾರಂಭ ಇದ್ದರೂ ಕೂಡ ಬೆಂಗಳೂರಿನಲ್ಲಿ ನಡೆದಾಗ ಮಹಾ ಪೌರರಿಗೆ ಗೌರವ ಕೊಟ್ಟು ಕರೆಯಬೇಕಾಗಿರುವುದು ನಮ್ಮ ಕರ್ತವ್ಯ. ಇದರ ಬಗ್ಗೆ ನಮ್ಮ ಹಿರಿಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಇದರ ಬಗ್ಗೆ ಎರಡು ಮಾತಿಲ್ಲ. ಮೆಟ್ರೋ ರೈಲು ಶಿಲಾನ್ಯಾಸ ಮಾಡುವಂತಹ ಸಂದರ್ಭದ ಬಗ್ಗೆ ಹೇಳುವುದಾದರೆ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಓಎನ್‌ಜಿಸಿ ಹಾಗೂ ಈ ಕಾರ್ಯಕ್ರಮ ಒಂದೆ ದಿನ ಇದ್ದಂತಹ ಹಿನ್ನಲೆಯಲ್ಲಿ ಅಲ್ಲಿ ಚರ್ಚೆ ಮಾಡಿ ಸದನವನ್ನು ಮುಂದೂಡಬೇಕು ಎಂದು ತೀರ್ಮಾನ ತೆಗೆದುಕೊಂಡು ಮಾಡಿದ್ದೇವೆ. ಆದರೆ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಮಾಧುಸ್ವಾಮಿ ಅವರ ಹಾಗೂ ಅನೇಕ ಸದಸ್ಯರ ಭಾವನೆ ಏನಿದೆ ಈ

ರೀತಿ ಒಂದು ಪ್ರತಿಷ್ಠಿತವಾದಂತಹ ದೊಡ್ಡ ದೊಡ್ಡ ಯೋಜನೆಗಳು ಜಾರಿಗೆ ಬಂದಾಗ, ಇಡೀ ರಾಜ್ಯದ ಜನಗಳ ಗಮನವನ್ನು ಸೆಳೆಯುವಂತಹ ಕಾಲದಲ್ಲಿ ನಮ್ಮ ಶಾಸಕರಿಗೆ ಬೇಕಾದಂತಹ ಗೌರವ, ವ್ಯವಸ್ಥೆಗಳು, ಆಮಂತ್ರಣ, ಹಾಗೂ ಅವರು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಬರುವ ಹಾಗೆ ನೋಡಿಕೊಳ್ಳುವುದು ಇದರಲ್ಲಿ ಎಲ್ಲೋ ಒಂದು ಕಡೆ ಶಿಷ್ಟಾಚಾರದಲ್ಲಿ ಕೊರತೆಯಾಗುತ್ತಿದೆ ಎಂದು ನನಗೆ ಅನ್ನಿಸುತ್ತದೆ. ಇದರಲ್ಲಿ ಎರಡು ಮಾತಿಲ್ಲ. ಇಲ್ಲಿ ಕುಳಿತಾಗ, ಆಗಿರುವುದೆಲ್ಲಾ ಸರಿ ಎಂದು ಹೇಳುವುದಕ್ಕೆ ನಾನೂ ಒಪ್ಪುವುದಿಲ್ಲ. ಮತ್ತೆ ಅದೇ ಮಾತಿಗೆ ವಾಪಸ್ಸು ಬರಬೇಕಾಗುತ್ತದೆ. ನಮ್ಮ ಸಂಸತ್ ಸದಸ್ಯರಾದ ಮಾನ್ಯ ಅನಂತಕುಮಾರ್‌ರವರಿಗೂ ಕೂಡ ನೋವಾಗಿದೆ. ಅವರು ಮೆಟ್ರೋ ರೈಲು ಬಗ್ಗೆ ಬೇಕಾದಷ್ಟು ಹೋರಾಟ ಮಾಡಿದರು. ಅನೇಕ ರೀತಿಯಲ್ಲಿ ಲೋಪದೋಷಗಳು ಆಗುತ್ತಿವೆ, ನಮ್ಮ ಅಧಿಕಾರಿಗಳು ಆ ಕಡೆ ಗಮನ ಕೊಡುವುದರ ಬಗ್ಗೆ ನಿರ್ಲಕ್ಷ ವಹಿಸುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಅದರ ಬಗ್ಗೆ ಈ ಕಡೆಯಿಂದ ಕೊರತೆಯಾಗಿದೆ ಎಂದು ಹೇಳುತ್ತಿದ್ದೇನೆ. ನಾನು ಯಾವುದನ್ನೂ ಮುಚ್ಚಿಟ್ಟುಕೊಳ್ಳುತ್ತಿಲ್ಲ. ಹಾಗೆ ನೀವು ಹೇಳಿದ ಹಾಗೆ ಒಂದು ಸೈಡ್‌ನಲ್ಲಿ ಕನ್ನಡ ಇದ್ದರೆ, ಇನ್ನೊಂದು ಸೈಡ್‌ನಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಆಮಂತ್ರಣ ಪತ್ರಿಕೆಯನ್ನು ಮುದ್ರಣ ಆಗುವುದಿರಬೇಕು. ಹೊರಗಡೆಯಿಂದ ಬಂದಂತಹವರಿಗೆ ಬೇಕು ಎನ್ನುವ ಕಾರಣಕ್ಕೆ ಇಂಗ್ಲೀಷ್‌ನಲ್ಲಿ ಇರಬೇಕು ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ನೀವು ಹೇಳಿದಂತಹ ಸಲಹೆಯನ್ನು ಈ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತದೆ. ಚೀಫ್ ಸೆಕ್ರೆಟರಿಯವರಿಗೆ ಇದರ ಬಗ್ಗೆ ಒಂದು ಸೂಚನೆಯನ್ನು ಕೊಡುತ್ತೇವೆ. ಇನ್ನು ಈ ರೀತಿ ತಪ್ಪುಗಳಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಸೂಚನೆಯನ್ನು ಕೊಡುತ್ತೇವೆ. ಬೆಂಗಳೂರಿನಲ್ಲಿ ನಡೆಯುವಂತಹ ಯಾವುದೇ ಒಂದು ಕಾರ್ಯಕ್ರಮದಲ್ಲಿ ಮಹಾಪೌರರಿಗೆ ಸರಿಯಾದ ರೀತಿಯಲ್ಲಿ ಗೌರವ ಸಿಗಬೇಕು. ಹಾಗೂ ಅವರಿಗೆ ವೇದಿಕೆಯ ಮೇಲುಗಡೆ ಕುಳಿತುಕೊಳ್ಳುವುದಕ್ಕೆ ಅವಕಾಶ ಸಿಗಬೇಕು, ಅದರಲ್ಲಿ ಎರಡು ಮಾತಿಲ್ಲ. ಮುಂದೆ ಈ ರೀತಿ ಲೋಪವಾಗದಂತೆ ಎಚ್ಚರ ವಹಿಸುತ್ತೇವೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ತಾವು ಶಾಸಕರಿಗೆ ಆಮಂತ್ರಣವನ್ನು ನೀಡದೆ ಇರುವುದು ಒಂದು ಕಡೆಯಾದರೆ, ಇನ್ನೊಂದು, ಈ ಶಿಷ್ಟಾಚಾರದ ಉಲ್ಲಂಘನೆ ಹೇಗೆ ಆಗುತ್ತದೆ ಎಂದರೆ ಮೊನ್ನೆ ನಡೆದಂತಹ ಮೆಟ್ರೋ ರೈಲು ಹಾಗು ಓಎನ್ ಜಿಸಿಗೆ ತಾವೇನು ಮುಖ್ಯ ಅತಿಥಿಗಳನ್ನಾಗಿ ಕರೆದಿದ್ದಿರಿ, ಅದರಲ್ಲಿ ಎರಡು ಮನೆಯ ವಿರೋಧ ಪಕ್ಷದ ನಾಯಕರನ್ನು ಆಹ್ವಾನ ಮಾಡಲಿಲ್ಲ. ಕನಿಷ್ಟ ಸೌಜನ್ಯಕ್ಕೆ ಅವರ ಹೆಸರನ್ನೂ ಕೂಡ ಪ್ರಿಂಟ್ ಮಾಡಲಿಲ್ಲ. ಮಾನ್ಯ ಧರ್ಮಸಿಂಗ್‌ರವರು ಪ್ರಧಾನ ಮಂತ್ರಿಗಳು ಬಂದಿದ್ದಾರೆ ಎಂದು ಕರೆಯದೆ ಹೋಗಿ ಮೇಲೆ ಕುಳಿತುಕೊಳ್ಳುವಂತಹ ಪ್ರಸಂಗ ಬಂದಿತು. ಎಲ್ಲಿದೆ ತೋರಿಸಿ? ಪತ್ರಿಕೆಯಲ್ಲಿ ಹಾಕಿದ್ದೀರಿ, ಯಾವ ಇನ್ವಿಟೇಷನ್ ಕಾರ್ಡ್‌ನಲ್ಲಿ ಹಾಕಿದ್ದೀರಿ? ವಿರೋಧ ಪಕ್ಷದ ಎರಡೂ ಸದನದ ನಾಯಕರನ್ನು ತಾವು ಕರೆದಿಲ್ಲ. ಅವರೇ ಪ್ರಧಾನ ಮಂತ್ರಿ ಬಂದಿದ್ದಾರೆ ಎಂದು ಹೋಗಿದ್ದಾರೆಯೇ

ಹೊರತು ನಿಮ್ಮಿಂದ ಆಪ್ಷನ ಇಲ್ಲ. ಆಪ್ಷನ ಪತ್ರಿಕೆಯಲ್ಲಾಗಲೀ, ಪತ್ರಿಕೆಯಲ್ಲಾಗಲಿ ಎರಡೂ ಮನೆಯ ವಿರೋಧ ಪಕ್ಷದ ನಾಯಕರ ಹೆಸರಿಲ್ಲ. ದಯಮಾಡಿ ನೋಡಿ. ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಕೇಳಿ, ಹೆಸರು ಹಾಕಿದ್ದೇವೆ ಇನ್ ವೈಟ್ ಮಾಡಿದ್ದೇವೆ. ಕಾರ್ಯಕ್ರಮಕ್ಕೆ ಬಂದಿದ್ದಾರೆ.

ಶ್ರೀ ಎನ್.ಎಸ್. ಬೋಸರಾಜು : ಕಾರ್ಡ್‌ನಲ್ಲಿ ಹೆಸರು ಹಾಕಿರಲಿಲ್ಲ, ಕಾರ್ಡ್‌ನಲ್ಲಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದ ನಾಯಕರಿಗೆ ಅಗೌರವ ಮಾಡಿದ್ದಾರೆ, ಶಾಸಕರಿಗೆ ಅಗೌರವ ಮಾಡಿದ್ದಾರೆ. ವಿರೋಧ ಪಕ್ಷದ ಮುಖಂಡರುಗಳಿಗೆ ಅಗೌರವ ಮಾಡಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು : ಏನು ಸದಸ್ಯರು ಹೇಳಿದ್ದಾರೆ ಲೀಡರ್ಸ್ ಆಫ್ ದಿ ಅಪೋಸಿಷನ್ ಹೆಸರು ಕಾರ್ಡ್‌ನಲ್ಲಿ ಹಾಕಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಯರೆಡ್ಡಿಯವರೇ, ಧರ್ಮಸಿಂಗ್‌ರವರನ್ನು ವಿರೋಧ ಪಕ್ಷದ ನಾಯಕರು ಎಂದು ಹಾಕದೆ ಇದ್ದರೂ, ಈ ಪ್ರಾಜೆಕ್ಟ್‌ಗೆ ಹೋರಾಟ ಮಾಡಿದ ಮನುಷ್ಯ ಎಂದಾದರು ಹಾಕಬೇಕಾಗಿತ್ತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸೇರಿಸಿದ್ದೇವೆ. ಬೇಕಾದರೆ ನೋಡಿ.

ಮಾನ್ಯ ಸದಸ್ಯರು : ಇಲ್ಲ, ಇಲ್ಲ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ಹಾಗಾದರೆ ಒಂದು ಇನ್ವಿಟೇಷನ್ ಕಾರ್ಡನ್ನು ಕಳುಹಿಸಿ ಹಾಗಾದರೆ.

ಶ್ರೀ ಎನ್.ಎಸ್. ಬೋಸರಾಜು : ಮಾಜಿ ಪ್ರಧಾನ ಮಂತ್ರಿಗಳನ್ನು ಹಾಕದೆ ಇದ್ದರೆ ಮಾಜಿ ಮುಖ್ಯ ಮಂತ್ರಿಗಳನ್ನು ಹಾಕಿಸಿ ಏನಾಯಿತು? ಅದಕ್ಕೆ ತಮ್ಮ ಹತ್ತಿರ ಒಂದು ಅವಕಾಶ ಇಲ್ಲವೇನು? ಒಬ್ಬರಿಗೆ ಒಂದು ಶಿಷ್ಟಾಚಾರ ಮತ್ತೊಬ್ಬರಿಗೆ ಇನ್ನೊಂದು ಶಿಷ್ಟಾಚಾರ.

ಶ್ರೀ ಎ. ಕೃಷ್ಣಪ್ಪ : ಶಾಸನ ಸಭಾ ಸದಸ್ಯರು ಬೆಂಗಳೂರಿನಲ್ಲಿ ಇರುತ್ತಾರೆ. ಅವರಿಗೆ ಒಂದು ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದ್ದೇವೆ ಎಂದು ನೀವು ರುಜುವಾತು ಮಾಡಿದರೆ ನೀವು ಏನೂ ಹೇಳಿದರೂ ಅದನ್ನು ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನು ಹೇಳಿದೆ. ತೊಂದರೆಯಾಗದೆ ಇನ್ನು ಮುಂದೆ ಈ ರೀತಿ ಆಗದಂತೆ ಕಟ್ಟೆಚ್ಚರ ವಹಿಸುತ್ತೇವೆ ಎಂದು ಹೇಳಿದ್ದೇನೆಯೇ ಹೊರತು ....

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವಾಗ ಅವರ ಭಾವನೆಗಳು ಏನಿತ್ತು? ನಿಮ್ಮ ನೀತಿಗಳು ಏನಿತ್ತು ಅದೆಲ್ಲಾ ಈಗ ಕಾರ್ಯರೂಪದಲ್ಲಿ ಇಲ್ಲ. ಇದು ಒಂದು ಬಾರಿ ಅಲ್ಲಿ, ಬೆಂಗಳೂರಿನಲ್ಲಿ ಇತ್ತೀಚೆಗೆ ಅದಂತಹ ಐದಾರು ಕಾರ್ಯಕ್ರಮಗಳಲ್ಲಿ ಈ ನಡತೆಯನ್ನು ನಾವು ಕಣ್ಣಾರೆ ನೋಡಿದ್ದೇವೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು : ನಾವು ಶ್ರೀಮಾನ್ ಯಡಿಯೂರಪ್ಪನವರನ್ನು ಹಾಗೂ ರಲ್ಲರನ್ನು ಕರೆಮಕೊಂಡು ಪ್ರಧಾನ ಮಂತ್ರಿಗಳ ಹತ್ತಿರ ಇದೇ ಯೋಜನೆ ವಿಚಾರದಲ್ಲಿ ಹೋಗಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರೆ ನಾವು ಬೇಕೆಂದೇ ರಾಜಕೀಯವನ್ನು ಮಾಡುತ್ತಿಲ್ಲ. ಉದ್ದೇಶಪೂರ್ವಕವಾಗಿ ಮೊದಲನೆಯದಾಗಿ ಮೇಯರ್‌ರವರಿಗೆ ಮಾಡಿರತಕ್ಕಂಥ ಅಪರಾಧ ಎರಡನೆಯದು ಈ ರಾಜ್ಯದ ಭಾಷೆ ಕನ್ನಡವನ್ನು ಪತ್ರಿಕೆಯಲ್ಲಿ ಹಾಕದೆ ಕನ್ನಡ ಭಾಷೆಯನ್ನು ಕಡೆಗಾಣಿಸಿರತಕ್ಕಂಥಾದ್ದು. ಇನ್ನು ಮೂರನೇಯದು ವಿರೋಧ ಪಕ್ಷದ ನಾಯಕರನ್ನು ಕರೆಯದೆ, ಅವರ ಪಕ್ಷದವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಆ ಸಮಾರಂಭದಲ್ಲೆ ವಿರೋಧ ಲಕ್ಷದ ನಾಯಕರು ಹೋಗಿದ್ದಾರೆಯೇ ಹೊರತು ಅವರನ್ನು ಮೇಲಕ್ಕೆ ಕರೆಯಲಿಲ್ಲ. ಮತ್ತು ಶಾಸಕರುಗಳನ್ನು ಹಾಗೂ ಎಲ್ಲಾ ಪಕ್ಷದ ಮುಖಂಡರುಗಳನ್ನು ಕಡೆಯದೆ ಅಪರಾಧ ಮಾಡಿದ್ದಾರೆ. ಇದು ಸರ್ಕಾರ ಮಾಡಿರತಕ್ಕಂಥ ಬೇಜವಾಬ್ದಾರಿ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಒಳ್ಳೆಯದಲ್ಲ. ಇದು ಈ ರಾಜ್ಯಕ್ಕೆ ಮಾಡಿರತಕ್ಕಂಥ ಅಗೌರವ ಹಾಗೂ ಅಪಮಾನ ಏನಿದು?

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ರವರೇ, ನೀವು ಮಾತನಾಡುವುದಕ್ಕೆ ಕೇಳಿದಿರಿ. ಅದಕ್ಕೆ ಪರ್ಮಿಷನ್ ಕೊಟ್ಟಿದ್ದೇನೆ. ಈಗ ಏನು ಲೋಪದೋಷಗಳು ಆಗಿವೆ ಅವುಗಳನ್ನು ಸರಿಪಡಿಸುತ್ತೇವೆ ಎಮದು ಹೇಳಿದ್ದಾರಲ್ಲಾ. ಮುಂದೆ ಆಗದ ಹಾಗೆ ಕಟ್ಟೆಚ್ಚರ ವಹಿಸುತ್ತೇವೆ ಎಂದು ಹೇಳಿದ್ದಾರೆ. ಬನ್ನಿ ಬನ್ನಿ. ಈಗ ಗಮನ ಸೆಳೆಯುವ ಸೂಚನೆ ಮಾನ್ಯ ಹೆಚ್.ಡಿ. ಬಸವರಾಜ್.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಇದು ಸ್ವಾಭಿಮಾನದ ಪ್ರಶ್ನೆ. ಇವರು ಕಾರ್ಯಕ್ರಮಕ್ಕೆ ನಮ್ಮನ್ನು ಕರೆಯುವುದೇ ಇಲ್ಲವೆಂದರೆ ಹೇಗೆ?

(ಶ್ರೀ ಸಿ.ಜೆ.ಸಿ. ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಶಾಸಕರನ್ನು ಈ ಎರಡೂ ಕಾರ್ಯಕ್ರಮಕ್ಕೆ ಆಮಂತ್ರಣ ಮಾಡಬೇಕಾಗಿತ್ತು.

(ಈ ಹಂತದಲ್ಲಿ ಶ್ರೀ ಜಿ.ಎ. ಶ್ರೀರಾಮರೆಡ್ಡಿ ಹಾಗೂ ಶ್ರೀ ಎಸ್. ರಾಜೇಂದ್ರನ್ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ವಿರೋಧ ಪಕ್ಷದ ಕಡೆಯಲ್ಲಿ ಕುಳಿತಿದ್ದಾಗ ಸೌಜನ್ಯಗಳ ಸರಿಮಳೆಯನ್ನೇ ಹರಿಸುತ್ತಿದ್ದರು. ಈಗ ಆ ಕಡೆಗೆ ಹೋದ ಮೇಲೆ ಆ ಸೌಜನ್ಯವೇ ಹೋಗಿ ಬಿಟ್ಟಿತು. ಅವರು ಈ ಕಡೆಗೆ ಇದ್ದಾಗ ಎಷ್ಟು ಸೌಜನ್ಯವಾಗಿ ಮಾತನಾಡುತ್ತಿದ್ದರು. ಈ ಕಡೆಗೆ ಇದ್ದಾಗ ಸೌಜನ್ಯದ ಸುರಿಮಳೆಯನ್ನು ಹರಿಸುತ್ತಿದ್ದ ಮಾನ್ಯ ಯಡಿಯೂರಪ್ಪನವರು, ಆ ಕಡೆಗೆ ಹೋದ ಮೇಲೆ ಸೌಜನ್ಯ ಎಲ್ಲಿ ಹೋಯಿತು?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, it is a shame. ನಾಚಿಕೆ ಇಲ್ಲದ ಜನರು ಇಲ್ಲಿ ಕುಳಿತಿದ್ದಾರೆ. ಅಷ್ಟೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇವೆ. ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡದಂತೆ ತಿದ್ದುಕೊಳ್ಳಬೇಕೆಂದು ಹೇಳುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಇದ್ದಾರೆ. ನಾನು ಈ ಬಗ್ಗೆ ಹಿಂದೆ ಸಭೆಯಲ್ಲಿ ಹೇಳಿದ್ದೇನೆ. ತಾವು ಸುತ್ತೋಲೆಯನ್ನು ಕಳುಹಿಸಿದ್ದೇವೆಂದು ಹೇಳಿದ್ದಿರಲ್ಲಾ. ಅದರಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಎಲ್ಲಾದರೂ ಬರೆದಿದ್ದಾರೆಯೆ ಎಂಬುದನ್ನು ತಾವು ನೋಡಿ. ಆ ಸುತ್ತೋಲೆಯಲ್ಲಿ ಆ ರೀತಿ ಎಲ್ಲೂ ಇಲ್ಲ? ಶಾಸಕರನ್ನು ಕರೆಯಬೇಕೆಂದು ಬರೆದಿದ್ದಾರೆ ಅಷ್ಟೆ. ನಾವು ಹೇಳುತ್ತೇವೆ. ತಾವು ದಯಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸುತ್ತೋಲೆಯಲ್ಲಿ ಮಾಡಿ.

(ಈ ಹಂತದಲ್ಲಿ ಮಾನ್ಯ ಎಸ್.ಎಸ್. ಪಾಟೀಲ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪಾಧ್ಯಕ್ಷರೆ, ಇವರಿಗೆ ವಾಕ್‌ಔಟ್ ಮಾಡುವುದು ಇದೇ ಕೆಲಸ ಆಗಿ ಹೋಯಿತು. ಪ್ರತಿಯೊಂದು ವಿಚಾರಕ್ಕೂ ವಾಕ್‌ಔಟ್ ಮಾಡುತ್ತಾರೆ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ನೀವು ಹೋಗಿ, ಇದೇ ಕೆಲಸ, ನೀವು ವಾಕ್‌ಔಟ್ ಮಾಡುವುದು ಇದೇ ಕೆಲಸ, ಜನರೆಲ್ಲಾ ನಿಮಗೆ x

(ಶ್ರೀ ಬಸವರಾಜರಾಯರೆಡ್ಡಿಯವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಮಾನ್ಯ ಹೆಚ್.ಡಿ. ಬಸವರಾಜ್‌ರವರೆ, ತಾವು ಪ್ರಸ್ತಾಪ ಮಾಡಿ.

(x ಈ ಪದವನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಈ ಚಿಹ್ನೆ ಸೂಚಿಸುತ್ತದೆ.)